## (V) ಬೆಂಗಳೂರು ನಗರದ ಸಂಪಂಗಿರಾಮನಗರದಲ್ಲಿರುವ ದೇವಾಂಗ ಸಂಘ ಪ್ರೌಢಶಾಲೆಯು ಕಟ್ಟಡದ ದುರಸ್ತಿಗಾಗಿ ಮುಚ್ಚಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆ

ಶ್ರೀ ಪಸಂತ ವಿ. ಸಾಲಿಯಾನ್.—ಸನ್ಮಾನ್ಯ ಅಧ್ಯಕ್ಷರೇ, ಬಾರೀಮು ಶಿಕ್ಷಣ ಸಚಿವರಲ್ಲಿ ಬೆಂಗಳೂರು ನಗರದ ಸಂಪಂಗಿರಾಮನಗರದಲ್ಲಿರುವ ದೇವಾಂಗ ಸಂಘ ಪ್ರೌಢಶಾಲೆಯು ಒಂದು ತಿಂಗಳ ಕಾಲ ಶಾಲಾ ಕಟ್ಟಡದ ದುರಸ್ತಿಗಾಗಿ ಮುಚ್ಚಿರುವುದರಿಂದ ಶಾಲಾ ಮಕ್ಕಳಿಗೆ ತೊಂದರೆಯಾಗಿರುವ ಬಗ್ಗೆ ಇಂದಿನ ಕನ್ನಡಪ್ರಭ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಇದರಿಂದ ಶಾಲಾ ಮಕ್ಕಳ ವಿದ್ಯಾಭ್ಯಾಸಕ್ಕೆ ತುಂಬಾ ತೊಂದರೆಯಾಗಿದೆ. ಈ ವಿಚಾರದಲ್ಲಿ ಸರಕಾರ ಕೂಡಲೇ ಪರಿಶೀಲಿಸಿ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಿಕೊಡಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ (ಮಾನ್ಯ ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದಲ್ಲಿರುವ ಸಂಪಂಗಿರಾಮನಗರದ ದೇವಾಂಗ ಸಂಘದ ಪ್ರೌಢಶಾಲೆಗೆ ಬಿಡುವು ಕೊಟ್ಟಿರುವ ಬಗ್ಗೆ ನಾನು ಕೂಡ ಪತ್ರಿಕೆಯಲ್ಲಿ ಓದಿದ್ದೇನೆ. ನಾನು ಡಿ.ಡಿ.ಪಿ.ಐ. ಯವರನ್ನು ಕರೆಸಿ ತಕ್ಷಣ ಸ್ಥಳ ಪರಿಶೀಲನೆ ಮಾಡಿ ವಿದ್ಯಾರ್ಥಿಗಳಿಗೆ ತೊಂದರೆಯಾಗದ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ಸಹ ಸೂಚನೆ ಕೊಟ್ಟಿದ್ದೇನೆ. ಅವರು ಈ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ.

## (VI) ಬಿಜಾಪುರದ ಸಹಕಾರಿ ಟೆಕ್ಸ್‌ಟೈಲ್ ಮಿಲ್ಲನಲ್ಲಿ ಕೆಲಸ ನಿಂತಿರುವುದು

ಶ್ರೀ ಬಾಬುರೆಡ್ಡಿ ತುಂಗಳ್.—ಅಧ್ಯಕ್ಷರೆ, ಬಿಜಾಪುರ ಸಹಕಾರಿ ಟೆಕ್ಸ್‌ಟೈಲ್ಸ್ ಮಿಲ್ಲನಲ್ಲಿ ಕೆಲಸ ನಿಂತಿರುವ ಬಗ್ಗೆ ಮಾನ್ಯ ಮಂತ್ರಿಯವರು ಏನು ಕ್ರಮ ಕೈಗೊಂಡಿದ್ದಾರೆ ಎಂಬುದನ್ನು ತಿಳಿಸಬೇಕು.

ಶ್ರೀ ಆರ್.ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೆ, ಇದು ಎರಡು ಸಾರಿ ಬಂದಿರುವ ಪ್ರಶ್ನೆ, ಈಗಾಗಲೇ ಉತ್ತರ ಕೊಟ್ಟಿದ್ದೇನೆ. ವರ್ಕರ್ಸ್ ವರ್ಕ್‌ಲೋಡನ್ನು ಒಪ್ಪಿಕೊಳ್ಳದೇ ಹೋದರೆ ನಾವು ಫ್ಯಾಕ್ಟರಿಯನ್ನು ನಡೆಸುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದೇನೆ. ಕ್ಯಾಬಿನೆಟ್‌ನಲ್ಲಿ ೮೦ ಲಕ್ಷ ರೂಪಾಯಿ ಮಾರ್ಕೆಟಿಂಗ್ ಫೆಡರೇಷನ್‌ನಿಂದ ಹತ್ತಿ ಕೊಂಡುಕೊಳ್ಳುವುದಕ್ಕೆ ಒಪ್ಪಿಕೊಂಡಿದ್ದೇವೆ. ೫೦ ಸಾವಿರ ರೂಪಾಯಿ ವರ್ಕಿಂಗ್ ಕ್ಯಾಪಿಟಲ್‌ಗೆ ಒಪ್ಪಿದ್ದೇವೆ. ಹತ್ತು ಸಾರಿ ಈ ಸಬ್ಜೆಕ್ಟ್ ತಂದರೂ ಅಷ್ಟೆ. ಇವತ್ತು ಅವರನ್ನು ಕರೆಸಿದಾಗಲೂ ಅವರು ಒಪ್ಪಿಕೊಳ್ಳಲಿಲ್ಲ. ಇವತ್ತೇ ಕರೆಸಿ ತೀರ್ಮಾನ ಮಾಡಿ. ವರ್ಕರ್ಸ್ ಒಪ್ಪಿಕೊಳ್ಳದೇ ಹೋದರೆ ಫ್ಯಾಕ್ಟರಿಯನ್ನು ನಡೆಸುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದೇನೆ. ಇಡೀ ರಾಜ್ಯದಲ್ಲಿ ಎಲ್ಲ ಕಡೆಗಿಂತ ಇಲ್ಲಿ ಹೆಚ್ಚಿನ ಸಂಬಳ ಕೊಡುತ್ತಾ ಇದ್ದೇನೆ, ೭೦೦ ವರ್ಕರ್ಸ್ ಇದ್ದಾರೆ. ವರ್ಕರ್ಸ್ ಒಪ್ಪಿಕೊಳ್ಳದೇ ಹೋದರೆ ಫ್ಯಾಕ್ಟರಿಯನ್ನು ಮುಚ್ಚಬೇಕಾಗುತ್ತದೆ ಹರಾಜು ಹಾಕಬೇಕಾಗುತ್ತದೆ.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೆ,.....

ಅಧ್ಯಕ್ಷರು.—ನಿಯಮ ೫೫ರಲ್ಲಿ ಪ್ರಶ್ನೆ ಕೇಳುವುದಕ್ಕಾಗುವುದಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ಆ ಕಾರ್ಮಿಕರು ಬೆಂಗಳೂರಿನವರು ಬಂದಿದ್ದರು.

ಅಧ್ಯಕ್ಷರು.—ದಯವಿಟ್ಟು ಅಲೋ ಮಾಡುವುದಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ಆ ಜನ ಬೆಂಗಳೂರಿನವರೆಗೆ ಬಂದಿದ್ದರು. ಮಾನ್ಯ ಸಚಿವರು ಈ ಮನೋಭಾವ ತೋರಿಸಿದರೆ ಪ್ರಯೋಜನವಾಗುವುದಿಲ್ಲ.

ಶ್ರೀ ಬಾಬುರೆಡ್ಡಿ ತುಂಗಳ್.—ಮಾನ್ಯ ಅಧ್ಯಕ್ಷರೆ,.....

ಅಧ್ಯಕ್ಷರು.—ನಿಯಮ ೫೫ರಲ್ಲಿ ಪ್ರಶ್ನೆ ಕೇಳಲಿಕ್ಕೆ ಬರುವುದಿಲ್ಲ.

ಶ್ರೀ ಬಾಬುರೆಡ್ಡಿ ತುಂಗಳ್.—ಕಾರ್ಮಿಕರ ಮೇಲೆ ದೋಷಾರೋಪಣೆ ಮಾಡುವವರು ಆಡಳಿತ ಮಂಡಲಿ ಮೇಲೆ ಏನು ಕ್ರಮ ತೆಗೆದುಕೊಂಡಿರಿ ?

(ಗೊಂದಲ)

ಅಧ್ಯಕ್ಷರು.—ಅದು ರಿಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ನೀವು ಬೇಕಾದರೆ ಕಾಲಿಂಗ್ ಅಟೆನ್‌ಷನ್ ಹಾಕಿ, ಹಾಕಿದರೆ ಕೇಳಲಿಕ್ಕೆ ಅವಕಾಶ ಇದೆ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಮಾನ್ಯ ಕೃಷ್ಣನ್‌ರವರೂ ಇದ್ದರು. ನಾಳೆ ಬೇಕಾದರೆ ಕಾಲಿಂಗ್ ಅಟೆನ್‌ಷನ್ ಹಾಕಿರಿ. ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.—ನಿಯಮ ೩೫೯ರ ವಿಷಯ ನೀವು ಹೇಳಿದ್ದು ಸರಿ. ಈ ಪ್ರಶ್ನೆ ಇತ್ಯರ್ಥವಾಗಿಲ್ಲ. ಅವರು ಕಷ್ಟಪಟ್ಟು ಬೆಂಗಳೂರಿಗೆ ಬಂದಿದ್ದರು, ಏನೂ ಪ್ರಯೋಜನವಾಗಿಲ್ಲ.

ಅಧ್ಯಕ್ಷರು.—ರೂಲ್ಸ್ ಪ್ರಕಾರ ಹೋಗೋಣ.

ಶ್ರೀ ಕೆ.ಬಿ. ಶಾಣಪ್ಪ.—ತಾವು ಪ್ರೊಟೆಕ್ಷನ್ ಕೊಡದೇ ಹೋದರೆ ಹೇಗೆ ? ಮಹತ್ವವಾದ ವಿಷಯ.

ಅಧ್ಯಕ್ಷರು.—ನಿಯಮ ೩೫೯ರ ವ್ಯಾಪ್ತಿಯಲ್ಲಿ ಪ್ರಶ್ನೆ ಕೇಳಲಿಕ್ಕೆ ಬರುವುದಿಲ್ಲ, ದಯವಿಟ್ಟು ಕ್ಷಮಿಸಿ. ಕಾಲಿಂಗ್ ಅಟೆನ್‌ಷನ್ ಕಳಿಸಿಕೊಡಿ. ಇದು ಮಹತ್ವವಾದ ವಿಷಯವಾಗಿರಬಹುದು. ತಾವೆಲ್ಲಾ ಮಹತ್ತರವಾದ ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಕಾಲಿಂಗ್ ಅಟೆನ್‌ಷನ್ ಕಳಿಸಿ, ನಿಮಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.—ಉತ್ತರ ಕೊಡುವಾಗ ಸಮಂಜಸವಾದ ಉತ್ತರ ಕೊಟ್ಟರೆ ಒಳ್ಳೆಯದು. ಕಾರ್ಮಿಕರು ಬಂದಿದ್ದರು. ವರ್ಕಲೋಡ್ ತಯಾರಾಗಿದೆ.

ಶ್ರೀ ಪಂಪಾಪತಿ.—ಮಾನ್ಯ ಮಂತ್ರಿಗಳಿಗೆ ಅಧಿಕಾರಿಗಳು ಸರಿಯಾದಂಥ ಮಾಹಿತಿ ಕೊಟ್ಟಿಲ್ಲ.

ಅಧ್ಯಕ್ಷರು.—ನಿಯಮ ೩೫೯ರ ವ್ಯಾಪ್ತಿಯಲ್ಲಿ ಬರುವುದಿಲ್ಲ. ಈಗ ಜಿ.ಆರ್. ರಾಮದಾಸ್, ಲಕ್ಕಪ್ಪ ಅವರದು ಇದೆ.

ಶ್ರೀ ಕುಶಾಲ.—ನನ್ನದೂ ಒಂದು ಇದೆ. ನಾನು ಮೂರು ಸಲ ಕೊಟ್ಟಿದ್ದೇನೆ, ಬರಲಿಲ್ಲ, ತಾವು ಕಡ್ಡಾಯ ಮಾಡುತ್ತೀರಿ.

ಅಧ್ಯಕ್ಷರು.—ಕುಶಾಲರವರೆ ತಮ್ಮದು ಈಗಾಗಲೇ ಹೌಸ್‌ನಲ್ಲಿ ಬಂದಿತ್ತು, ಅದಕ್ಕೋಸ್ಕರ ಮಾಡಲಿಲ್ಲ ಅಷ್ಟೆ. ನಾಳೆ ಹಾಕಿಸಿಕೊಡುತ್ತೇನೆ.

ಶ್ರೀ ಕುಶಾಲ.—ನಾನು ಮೂರು ಸಲ ಕೊಟ್ಟಿದ್ದೇನೆ.

ಅಧ್ಯಕ್ಷರು.—ನಾಳೆ ಹಾಕಿಸಿಕೊಡುತ್ತೇನೆ.

## ಉಪಾಧ್ಯಕ್ಷರ ಚುನಾವಣೆ

ಅಧ್ಯಕ್ಷರು.—ಉಪಾಧ್ಯಕ್ಷರ ಸ್ಥಾನಕ್ಕೆ ಇಬ್ಬರ ಹೆಸರುಗಳನ್ನು ಸೂಚಿಸಿರತಕ್ಕ ೩ ಪ್ರಸ್ತಾವಗಳು ಬಂದಿವೆ. ಕಾರ್ಯಕ್ರಮದ ಪಟ್ಟಿಯಲ್ಲಿರುವ ಕ್ರಮದಲ್ಲಿಯೇ ಅವರವರ ಹೆಸರಿನಲ್ಲಿರತಕ್ಕ ಪ್ರಸ್ತಾವಗಳನ್ನು ಸೂಚಿಸಲು ಸೂಚಕರ ಹೆಸರುಗಳನ್ನು ಕರೆಯುತ್ತೇನೆ. ಎಲ್ಲ ಪ್ರಸ್ತಾವಗಳನ್ನು ಸೂಚಿಸಿ ಅವುಗಳನ್ನು ಅನುಮೋದಿಸಿದ ನಂತರ, ಯಾವ ಕ್ರಮದಲ್ಲಿ ಸೂಚಿಸಲಾಗಿದೆಯೋ ಅದೇ ಕ್ರಮದಲ್ಲಿ ಪ್ರಸ್ತಾವಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಮೊದಲನೆಯ ಪ್ರಸ್ತಾವ ಅಂಗೀಕಾರವಾದಲ್ಲಿ ಇತರ ಪ್ರಸ್ತಾವಗಳನ್ನು ಮತಕ್ಕೆ ಹಾಕುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಸನ್ಮಾನ್ಯ ಅಧ್ಯಕ್ಷರೆ, "ಶ್ರೀ ಲಕ್ಷ್ಮೀನರಸಿಂಹಯ್ಯ ಅವರನ್ನು ವಿಧಾನ ಸಭೆಯ ಉಪಾಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ನಾನು ಸೂಚಿಸುತ್ತೇನೆ."

ಶ್ರೀ ಬಿ.ಎಸ್. ಚಂದ್ರಶೇಖರಯ್ಯ.—ಅದನ್ನು ನಾನು ಅನುಮೋದಿಸುತ್ತೇನೆ.